C.R.P.67

Form No.4 (Civil)
Deposition Sheets
(R.P.No.57)

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ

S.C. No. 121/2021 ಸಿ. ಡಬ್ಲ್ಯೂ- 28 ಪಿ. ಡಬ್ಲ್ಯೂ-18

ದಿನಾಂಕಃ- 20.07.2024 ರಂದು ಪ್ರಮಾಣ ವಚನ ಬೋದಿಸಲಾಗಿದೆ

| | |
|---|---|
| ಸಾಕ್ಷಿದಾರರ ಹೆಸರು | ಶಿವಣ್ಣ |
| ತಂದೆಯ ಹೆಸರು | ದೊಡ್ಡತಮ್ಮಯ್ಯ ಅಲಿಯಾಸ್ ಸಿದ್ದೇಗೌಡ |
| ವಯಸ್ಸು | 55 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ | ಗೆಜ್ಜಲಗೆರೆ ಗ್ರಾಮ |

ಮುಖ್ಯ ವಿಚಾರಣೆಃ- ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ-

1. ನ್ಯಾಯಾಲಯದ ಮುಂದ ನಿಂತಿರುವ ಆರೋಪಿಗಳ ಪರಿಚಯ ನನಗೆ ಇದೆ. ನಮ್ಮ ಗೆಜ್ಜಲಗೆರೆ ಗ್ರಾಮದ ಶ್ರೀಕಂಠ ಮತ್ತು ರವಿ ರವರ ಪರಿಚಯ ನನಗೆ ಇದೆ. ಶ್ರೀಕಂಠ ರವರಿಗೆ ಹೇಮಂತ ಕುಮಾರ ಎಂಬ ಮಗ ಇದ್ದನು ಎಂಬ ವಿಷಯ ನನಗೆ ಗೊತ್ತು. ಸದರಿ ಹೇಮಂತ ಕುಮಾರನು ಸುಮಾರು 2 ಅಥವಾ 3 ವರುಷಗಳ ಹಿಂದೆ ಮರಣ ಹೊಂದಿದ್ದಾನೆ. ನಮ್ಮ ಗೆಜ್ಜಲಗೆರೆ ಗ್ರಾಮದ ಡೈರಿಯ ಬಳಿ ಗಲಾಟೆಯಾಗಿದೆ ಮತ್ತು ಆ ಗಲಾಟೆಯಲ್ಲಿ ಹೇಮಂತ ಕುಮಾರನು ಮರಣ ಹೊಂದಿದ್ದಾನೆ ಎಂಬ ವಿಷಯವು ನನಗೆ ತಿಳಿದು ಬಂದಿದೆ.

2. 5 ನೇ ಆರೋಪಿಯ ಪರಿಚಯ ನನಗೆ ಇದೆ.

3. ನನ್ನ ಬಳಿ ಮೊಬೈಲು ಫೋನು ಇತ್ತು ಮತ್ತು ಆ ಮೊಬೈಲು ಫೋನು ಕಳವು ಆಗಿತ್ತು. ನನ್ನ ಮೊಬೈಲು ಫೋನಿನಲ್ಲಿ ಇದ್ದ ಸಿಮ್ ಕಾರ್ಡು ನನ್ನ ಹೆಸರಿನಲ್ಲಿಯೇ ಇತ್ತು.

4. ಸುಮಾರು 1 ಅಥವಾ 2 ವರುಷಗಳ ಹಿಂದೆ ಪೊಲೀಸರು ನನ್ನನ್ನು ಠಾಣೆಗೆ ಕರೆಸಿದ್ದರು. ಸದರಿ ನನ್ನ ಹೆಸರಿನಲ್ಲಿ ಇದ್ದ ಸಿಮ್ ಕಾರ್ಡು 5 ನೇ ಆರೋಪಿಯಾದ ಪುಟ್ಟ ಅಲಿಯಾಸ್ ಪ್ರಸಾದನ ಬಳಿ ಇತ್ತು ಮತ್ತು ಯಾವ ಕಾರಣದಿಂದ ನನ್ನ ಸಿಮ್ ಕಾರ್ಡು 5 ನೇ ಆರೋಪಿಯ ಕೈಗೆ ಹೋಗಿದೆ ಎಂಬುದಾಗಿ ಪೊಲೀಸರು

ನನ್ನನ್ನು ಕೇಳಿದರು. ಆಗ ನಾನು " ನನಗೆ ಗೊತ್ತಿಲ್ಲ " ಎಂದು ಹೇಳಿದೆನು. ನಂತರ ಪೊಲೀಸರು ನನ್ನನ್ನು ಮನೆಗೆ ಕಳುಹಿಸಿದರು.

5. ನಾನೇ ನನ್ನ ಮೊಬೈಲು ಫೋನನ್ನು 5 ನೇ ಆರೋಪಿಗೆ ಉಪಯೋಗಿಸಲು ಕೊಟ್ಟಿದ್ದೆ ಎಂಬುದಾಗಿ ನಾನು ಪೊಲೀಸರ ಬಳಿ ಹೇಳಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಈ ಸಾಕ್ಷಿದಾರರು ಇವರ ಹೇಳಿಕೆಗೆ ವಿರುದ್ಧವಾಗಿ ಸಾಕ್ಷಿ ನುಡಿದಿರುವುದು ಕಂಡು ಬರುತ್ತದೆ ಮತ್ತು ಆ ಕಾರಣದಿಂದ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕು ಮತ್ತು ಪಾಟೀ ಸವಾಲು ಮಾಡಲು ಅನುಮತಿಯನ್ನು ಕೊಡಬೇಕು ಎಂದು ಪ್ರಾರ್ಥನೆ ಮಾಡಿದ್ದಾರೆ.

ಕಡತವನ್ನು ಪರಿಶೀಲನೆ ಮಾಡಿ ನೋಡಲಾಗಿ ಈ ಸಾಕ್ಷಿದಾರರು ಕಲಂ 161ರ ಅಡಿಯಲ್ಲಿ ನೀಡಿರುವ ಹೇಳಿಕೆಯು ಲಭ್ಯ ಇದೆ ಮತ್ತು ಈ ಸಾಕ್ಷಿದಾರರು ತಮ್ಮ ಸದರಿ ಹೇಳಿಕೆಗೆ ವಿರುದ್ಧವಾಗಿ ಸಾಕ್ಷ್ಯ ನುಡಿದಿದ್ದಾರೆ, ಆಕಾರಣದಿಂದ ಮಾನ್ಯ ಅಭಿಯೋಜಕರ ಪ್ರಾರ್ಥನೆಯನ್ನು ಮಾನ್ಯ ಮಾಡಿದೆ. )

ಪಾಟೀ ಸವಾಲುಃ- ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ-

6. ನನ್ನ ಹೆಸರಿನಲ್ಲಿದ್ದ ಸಿಮ್ ಕಾರ್ಡನ್ನು ನಾನೇ 5 ನೇ ಆರೋಪಿ ಪ್ರಸಾದ ಅಲಿಯಾಸ್ ಪುಟ್ಟ ರವರಿಗೆ ಉಪಯೋಗಿಸಲು ನೀಡಿದ್ದೆನು ಮತ್ತು ಸದರಿ ಆರೋಪಿಯು ಸದರಿ ಸಿಮ್ ಕಾರ್ಡನ್ನು ಉಪಯೋಗಿಸುತ್ತಾ ಇದ್ದನು ಮತ್ತು ನಾನು ಈ ಬಗ್ಗೆ ಪೊಲೀಸರಿಗೆ ಹೇಳಿಕೆಯನ್ನು ಕೊಟ್ಟಿದ್ದೇನೆ ಎಂದರೆ ಸುಳ್ಳು.

7. ಈ ಸಾಕ್ಷಿಯ ಹೇಳಿಕೆಯಲ್ಲಿರುವ ಸದರಿ ಭಾಗಾಂಶವನ್ನು ಅಂದರೆ " ಸದರಿ ಸಿಮ್ ಅನ್ನು ಉಪಯೋಗಿಸಲು ನಮ್ಮ ಊರಿನ ಪ್ರಸಾದ ಅಲಿಯಾಸ್ ಪುಟ್ಟ ರವರಿಗೆ ನೀಡಿದ್ದೆನು ಸದರಿ ನನ್ನ ಬಾಬ್ತು ಸಿಮ್ ಅನ್ನು ಪ್ರಸಾದ ಅಲಿಯಾಸ್ ಪುಟ್ಟ ಉಪಯೋಗಿಸುತ್ತಿದ್ದನು " ಎಂಬ ಭಾಗವನ್ನು ನಿಪಿ. 82 ಎಂದು ಗುರುತಿಸಿದೆ.

8. 5 ನೇ ಆರೋಪಿಯು ನನ್ನ ಮಾಂಸದ ಅಂಗಡಿಗೆ ಆಗಾಗ ಬರುತ್ತಾನೆ ಹಾಗಾಗಿ ನಾನು ಆತನನ್ನು ನೋಡಿದ್ದೇನೆ. 5 ನೇ ಆರೋಪಿಯು ನನ್ನ ಅಂಗಡಿಯ ಖಾಯಂ ಗಿರಾಕಿಯಾಗಿದ್ದಾರೆ ಎಂದರೆ ಸರಿ.

9. 5 ನೇ ಆರೋಪಿಯು ನನ್ನ ಅಂಗಡಿಗೆ ಬಂದು ವ್ಯಾಪಾರ ಮಾಡುವುದನ್ನು ನಿಲ್ಲಿಸಿಬಿಡುತ್ತಾನೆ ಎಂಬ ಭಯದಿಂದ ನಾನು ಈ ನ್ಯಾಯಾಲಯದ ಮುಂದೆ ಸತ್ಯ ಸಂಗತಿಗಳನ್ನು ಮರೆಮಾಚುತ್ತಾ ಇದ್ದೇನೆ ಎಂದರೆ ಸುಳ್ಳು.

ಪಾಟೀ ಸವಾಲುಃ- ಆರೋಪಿಗಳ ಪರವಾಗಿ ಶ್ರೀ. ಸಿ .ಪಿ. ವಕೀಲರಿಂದಃ-

ಏನೂ ಇಲ್ಲ .

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

ಸಹಿ/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.